**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ.**

**ಸಿ.ಸಿ ನಂ: 330/2021**

ಪಿ.ಡಬ್ಲ್ಯೂ - 1
ಸಿ.ಡಬ್ಲ್ಯೂ - 1

ದಿನಾಂಕ 18-07-2026 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

(ಸಾಕ್ಷಿಗೆ ಕನ್ನಡ ಭಾಷೆ ತಿಳಿಯುವುದಿಲ್ಲ ಅಂತಾ ನುಡಿದಿದ್ದರಿಂದ ಮರಾಠಿ ಭಾಷೆ ಬಲ್ಲ ನ್ಯಾಯಾಲಯದಲ್ಲಿ ಹಾಜರಿದ್ದ ಶ್ರೀ ಬಿ ಎಮ್ ಹೆಚ್ ವಕೀಲರನ್ನು ಭಾಷಾಂತರಕಾರರಾಗಿ ನೇಮಿಸಿಕೊಳ್ಳಲಾಯಿತು. ಸಾಕ್ಷಿಗೆ ಮರಾಠಿ ಭಾಷೆಯಲ್ಲಿ ಕೇಳಿ ಅವರು ಮರಾಠಿ ಭಾಷೆಯಲ್ಲಿ ಹೇಳಿದ ಉತ್ತರವನ್ನು ಕನ್ನಡ ಭಾಷೆಗೆ ಭಾಷಾಂತರಿಸಿ ದಾಖಲಿಸಿಕೊಳ್ಳಲಾಯಿತು. )

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಎಸ್ ಎಂ ವಕೀಲರಿಂದ

ಘಟನೆ ನಡೆದಾಗ ನಾನು ಅಪಘಾತ ಸ್ಥಳದಲ್ಲಿ ಇರಲಿಲ್ಲ ಅಂದರೆ ಸರಿ . ಯಾರ ತಪ್ಪಿನಿಂದ ಅಪಘಾತವಾಗಿದೆ ಅಂತಾ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಟೆಂಪೋ ಚಾಲಕನ ನಿರ್ಲಕ್ಷ್ಯತನದಿಂದ ನನ್ನ ಮಗ ಮತ್ತು ನನ್ನ ಮಗನ ಸ್ನೇಹಿತನಿಗೆ ಅಪಘಾತವಾಗಿ ಸಾವು ಸಂಭವಿಸಿತು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂತಾ ಸೂಚಿಸುವುದು ಸರಿಯಲ್ಲ. ನನ್ನ ಮಗ ಮತ್ತು ಆತನ ಸ್ನೇಹಿತ ಮೋಟರ ಸೈಕಲನ್ನು ತಪ್ಪು ರಸ್ತೆ ಬದಿಯಿಂದ ಚಲಾಯಿಸಿಕೊಂಡು ಬಂದು ಟೆಂಪೋಗೆ ಹಾಯಿಸಿ ಅಪಘಾತ ಪಡಿಸಿಕೊಂಡಿದ್ದಾರೆ, ಅವರ ತಪ್ಪಿನಿಂದ ಅಪಘಾತವಾಗಿದೆ ಅಂತಾ ಸೂಚಿಸುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.